## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :570 |
| ಉತ್ತರಿಸಬೇಕಾದ ದಿನಾಂಕ | :08.12.2023 |
| ಸದಸ್ಯರ ಹೆಸರು | :ಶ್ರೀ ಡಿ.ಎಸ್. ಅರುಣ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | :ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಒಲಿಂಪಿಕ್ಸ್, ಏಷ್ಯಾಗೇಮ್ಸ್ ನಂತಹ ಅಂತಾರಾಷ್ಟ್ರೀಯ ಕ್ರೀಡೆಯಲ್ಲಿ ಪದಕ ಪಡೆದ ಕ್ರೀಡಾಪಟುಗಳಿಗೆ ಸರ್ಕಾರದಿಂದ ನೀಡುತ್ತಿರುವ ಯೋಜನೆಗಳೇನು: | ಒಲಿಂಪಿಕ್ಸ್, ಏಷ್ಯಾಗೇಮ್ಸ್ ನಂತಹ ಅಂತಾರಾಷ್ಟ್ರೀಯ ಕ್ರೀಡೆಯಲ್ಲಿ ಪದಕ ಪಡೆದ ಕ್ರೀಡಾಪಟುಗಳಿಗೆ ಉತ್ತೇಜಿಸುವ ಸಲುವಾಗಿ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ:-<br><br>**ನಗದು ಪುರಸ್ಕಾರ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಅಧಿಕೃತ ಕ್ರೀಡಾ ಕೂಟಗಳಲ್ಲಿ ಭಾಗವಹಿಸಿ ವಿಜೇತರಾದ ಕ್ರೀಡಾಪಟುಗಳಿಗೆ ಕೆಳಕಾಣಿಸಿದಂತೆ ನಗದು ಪುರಸ್ಕಾರದ ಮೊತ್ತವನ್ನು ಸರ್ಕಾರದ ಆದೇಶ ಸಂ: ವೈಎಸ್‌ಡಿ-ಸಿಡಿಎನ್/176/2022; ದಿನಾಂಕ: 29-11-2023ರಂತೆ ಪರಿಷ್ಕರಿಸಲಾಗಿರುತ್ತದೆ-<br><br>(ರೂ. ಲಕ್ಷಗಳಲ್ಲಿ) |

| ಕ್ರ. ಸಂ. | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಒಲಂಪಿಕ್ ಗೇಮ್ಸ್ | 500.00 | 300.00 | 200.00 |
| 2 | ವರ್ಲ್ಡ್ ಕಪ್ | 200.00 | 150.00 | 100.00 |
| 3 | ವರ್ಲ್ಡ್ ಚಾಂಪಿಯನ್ ಶಿಪ್ (4 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 100.00 | 75.00 | 50.00 |
| 4 | ವರ್ಲ್ಡ್ ಚಾಂಪಿಯನ್ ಶಿಪ್ (2 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 75.00 | 50.00 | 30.00 |
| 5 | ಏಷಿಯನ್ ಗೇಮ್ಸ್ | 50.00 | 30.00 | 20.00 |
| 6 | ಕಾಮನ್‌ವೆಲ್ತ್ ಗೇಮ್ಸ್ | 50.00 | 30.00 | 20.00 |
| 7 | ವರ್ಲ್ಡ್ ಚಾಂಪಿಯನ್ ಶಿಪ್ ( ಪ್ರತಿ ವರ್ಷ ನಡೆಯುವ ಕ್ರೀಡಾಕೂಟ) | 25.00 | 15.00 | 10.00 |
| 8 | ಯೂತ್ ಒಲಂಪಿಕ್ ಗೇಮ್ಸ್/ ಏಷಿಯನ್ ಯೂತ್ ಗೇಮ್ಸ್/ ಕಾಮನ್ ವೆಲ್ತ್ ಯೂತ್ | 15.00 | 10.00 | 5.00 |

| | | | | | | |
|---|---|---|---|---|---|---|
| | | | ಗೇಮ್ಸ್ | | | |
| | | 9 | ಏಷಿಯನ್/ ಕಾಮನ್ ವೆಲ್ತ್ ಚಾಂಪಿಯನ್ ಶಿಪ್ (4 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 20.00 | 15.00 | 10.00 |
| | | 10 | ಜೂನಿಯರ್/ ಯೂತ್ ಕಾಮನ್ ವೆಲ್ತ್ ಚಾಂಪಿಯನ್ ಶಿಪ್/ಗ್ರ್ಯಾಂಡ್ ಸ್ಲಾಮ್/ ಗ್ರ್ಯಾಂಡ್ ಮಾಸ್ಟರ್/ಗ್ರ್ಯಾಂಡ್ ಪ್ರಿಕ್ಸ್/ ಎ.ಎಫ್.ಆರ್.ಒ. ಏಷಿಯನ್ ಗೇಮ್ಸ್/ಎಸ್.ಎ.ಎಫ್. ಗೇಮ್ಸ್/ ಏಷಿಯನ್/ ಕಾಮನ್ ವೆಲ್ತ್ ಚಾಂಪಿಯನ್ ಶಿಪ್ | 10.00 | 5.00 | 2.50 |
| | | 11 | ನ್ಯಾಷನಲ್ ಗೇಮ್ಸ್ (2 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 8.00 | 6.00 | 4.00 |
| | | 12 | ಸೀನಿಯರ್ ನ್ಯಾಷನಲ್ಸ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ) | 5.00 | 3.00 | 2.00 |
| | | 13 | ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್/ ಆಲ್ ಇಂಡಿಯ ಇಂಟರ್ ಯೂನಿವರ್ಸಿಟಿ ಗೇಮ್ಸ್ | 3.00 | 2.00 | 1.00 |
| | | 14 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳಿಗೆ ಮಾತ್ರ)/ ಖೇಲೋ ಇಂಡಿಯಾ ಯೂತ್ ಗೇಮ್ಸ್, ಎಸ್.ಜಿ.ಎಫ್.ಐ. (U-17) | 2.00 | 1.50 | 1.00 |
| | | 15 | ಸೀನಿಯರ್ ನ್ಯಾಷನಲ್ಸ್ (ಒಲಂಪಿಕ್ ಕ್ರೀಡೆಗಳನ್ನು ಹೊರತುಪಡಿಸಿ ) | 1.50 | 1.00 | 0.50 |
| | | 16 | ಸಬ್ ಜ್ಯೂನಿಯರ್ಸ್ ನ್ಯಾಷನಲ್/ ಎಸ್.ಜಿ.ಎಫ್.ಐ. (U-14) (ಒಲಂಪಿಕ್ ಕ್ರೀಡೆಗಳಿಗೆ | 1.00 | 0.75 | 0.50 |

| | | | |
|---|---|---|---|
| | ಮಾತ್ರ) | | | |
| 17 | ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳನ್ನು ಹೊರತುಪಡಿಸಿ ) | 0.75 | 0.50 | 0.25 |
| 18 | ಸಬ್ ಜೂನಿಯರ್ ನ್ಯಾಷನಲ್ (ಒಲಂಪಿಕ್ ಕ್ರೀಡೆಗಳನ್ನು ಹೊರತುಪಡಿಸಿ ) | 0.50 | 0.30 | 0.20 |

ವಿಶೇಷಚೇತನರಿಗೆ ನಗದು ಪುರಸ್ಕಾರದ ವಿವರ:

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | ಚಿನ್ನ | ಬೆಳ್ಳಿ | ಕಂಚು |
|---|---|---|---|---|
| 1 | ಪ್ಯಾರಾಲಿಂಪಿಕ್ ಗೇಮ್ಸ್ | 500.00 | 300.00 | 200.00 |
| 2 | ಪ್ಯಾರಾ ವರ್ಲ್ಡ್ ಕಪ್ | 200.00 | 150.00 | 100.00 |
| 3 | ಪ್ಯಾರಾ ವರ್ಲ್ಡ್ ಚಾಂಪಿಯನ್ ಶಿಪ್ (4 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 75.00 | 50.00 | 30.00 |
| 4 | ಪ್ಯಾರಾ ಏಷಿಯನ್ ಗೇಮ್ಸ್ | 50.00 | 30.00 | 20.00 |
| 5 | ಪ್ಯಾರಾ ಕಾಮನ್‌ವೆಲ್ತ್ ಗೇಮ್ಸ್ | 50.00 | 30.00 | 20.00 |
| 6 | ಪ್ಯಾರಾ ಚಾಂಪಿಯನ್ ಶಿಪ್ (2 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 20.00 | 15.00 | 10.00 |
| 7 | ಪ್ಯಾರಾ ಏಷಿಯನ್/ ಕಾಮನ್ ವೆಲ್ತ್ ಚಾಂಪಿಯನ್ಶಿಪ್ (4 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 20.00 | 15.00 | 10.00 |
| 8 | ಪ್ಯಾರಾ ಯೂತ್/ಒಲಂಪಿಕ್/ ಏಷಿಯನ್ ಗೇಮ್ಸ್/ ಕಾಮನ್‌ವೆಲ್ತ್ ಗೇಮ್ಸ್ | 15.00 | 10.00 | 5.00 |
| 9 | ಪ್ಯಾರಾ ವರ್ಲ್ಡ್ ಚಾಂಪಿಯನ್ ಶಿಪ್ ( ಪ್ರತಿ ವರ್ಷ ನಡೆಯುವ ಕ್ರೀಡಾಕೂಟ) | 10.00 | 5.00 | 2.50 |
| 10 | ಪ್ಯಾರಾ ಏಷಿಯನ್/ ಕಾಮನ್ ವೆಲ್ತ್ ಚಾಂಪಿಯನ್ ಶಿಪ್ (2 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | 10.00 | 5.00 | 3.00 |
| 11 | ಐಬಿಎಸ್ ಎ/ಡೆಫ್ಲಿಂಪಿಕ್ಸ್ | 10.00 | 5.00 | 2.50 |

| | | | | |
|---|---|---|---|---|
| | (Deaflympics) | | | |
| 12 | ಐಡಿಎಫ್ ಎ ವರ್ಲ್ಡ್ ಕಪ್ ಗೇಮ್ಸ್ | 5.00 | 3.00 | 2.00 |
| 13 | ಬ್ಲೈಂಡ್ ಕ್ರಿಕೆಟ್ ವರ್ಲ್ಡ್ ಕಪ್ (4 ವರ್ಷಗಳಿಗೊಮ್ಮೆ ನಡೆಯುವ ಕ್ರೀಡಾಕೂಟ) | ವಿನ್ನರ್-5 ಲಕ್ಷ | | |
| | | ರನ್ನರ್- 3 ಲಕ್ಷ | | |
| 14 | ಪ್ಯಾರಾ ನ್ಯಾಷನಲ್ ಚಾಂಪಿಯನ್ ಶಿಪ್ | 1.00 | 0.75 | 0.50 |
| 15 | ಪ್ಯಾರಾಜ್ಯೂನಿಯರ್/ಸಬ್ ಜೂನಿಯರ್ ನ್ಯಾಷನಲ್ ಚಾಂಪಿಯನ್ ಶಿಪ್ | 0.75 | 0.50 | 0.25 |

**ಶೈಕ್ಷಣಿಕ ಶುಲ್ಕ ಮರುಪಾವತಿ:** ರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತರಾದಲ್ಲಿ /ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯದಿಂದ ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಗರಿಷ್ಠ ಮೊತ್ತ ರೂ.50,000/-ಗಳವರೆಗೆ ಶೈಕ್ಷಣಿಕ ಶುಲ್ಕ ಮರು ಪಾವತಿ ಮಾಡಲಾಗುತ್ತಿದೆ.

**ಏಕಲವ್ಯಪ್ರಶಸ್ತಿ:** ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ನೀಡಲಾಗುವುದು. 2023ನೇ ಸಾಲಿನಲ್ಲಿ ಪರಿಷ್ಕೃತ ಸರ್ಕಾರದ ಪರಿಷ್ಕೃತ ಆದೇಶ ಹೊರಡಿಸಲಾಗಿದ್ದು, ಇದರಂತೆ ಏಕಲವ್ಯ ಪ್ರಶಸ್ತಿಯು ರೂ4.00ಲಕ್ಷಗಳ ನಗದು ಬಹುಮಾನವನ್ನೊಳಗೊಂಡಿರುತ್ತದೆ.

**ಪರಿಶಿಷ್ಟಜಾತಿ ಮತ್ತು ಪಂಗಡದ** ಸಾಧಕ ಕ್ರೀಡಾಪಟುಗಳಿಗೆ ವಿಶೇಷ ನಗದು ಪುರಸ್ಕಾರ ವಿತರಿಸಲಾಗುತ್ತಿದೆ. ಅಂತಾರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯಮಟ್ಟದ ಕ್ರೀಡಾಕೂಟಗಳ ಪದಕ ವಿಜೇತರಿಗೆ ಕ್ರಮವಾಗಿ ತಲಾ ರೂ.5.00, 3.00 ಮತ್ತು 1.00 ಲಕ್ಷಗಳ ನಗದು ಪುರಸ್ಕಾರ ನೀಡಲಾಗುತ್ತಿದೆ ಹಾಗೂ ಅಂತಾರಾಷ್ಟ್ರೀಯ/ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಜಿಮ್ ಸಾಮಗ್ರಿಗಳನ್ನು ನೀಡಲಾಗುತ್ತಿದೆ.

**ಸಾಮಾನ್ಯ ಪ್ರವೇಶ ಪರೀಕ್ಷೆ:** ರಾಷ್ಟ್ರ ಮತ್ತು ಅಂತಾರಾಷ್ಟ್ರ ಮಟ್ಟದಲ್ಲಿ ಅತ್ಯುನ್ನತ ಸಾಧನೆ ಮಾಡಿದ ರಾಜ್ಯದ ಕ್ರೀಡಾಪಟುಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕ್ರೀಡಾ ಮೀಸಲಾತಿ ಅಡಿಯಲ್ಲಿ ಇಂಜಿನಿಯರಿಂಗ್, ವೈದ್ಯಕೀಯ ಮುಂತಾದ ವೃತ್ತಿಪರ ಕೋರ್ಸ್ ಗಳಿಗೆ ಪ್ರವೇಶ ಕಲ್ಪಿಸಲಾಗುತ್ತಿದೆ.

<table>
<tr><td></td><td></td><td><u>ಅಮೃತ ಕ್ರೀಡಾ ದತ್ತು</u>: ಸರ್ಕಾರವು 2021-22ನೇ ಸಾಲಿನಿಂದ ಹೊಸದಾಗಿ ಅಮೃತ ಕ್ರೀಡಾ ದತ್ತು ಯೋಜನೆಯನ್ನು ಜಾರಿಗೆ ತಂದಿರುತ್ತದೆ. ಸದರಿ ಯೋಜನೆಯು 2024 ಪ್ಯಾರಿಸ್ ನಲ್ಲಿ ನಡೆಯುವ ಒಲಂಪಿಕ್ಸ್‌ನಲ್ಲಿ ಭಾಗವಹಿಸಲು ಸಹಾಯವಾಗುವಂತೆ ಕರ್ನಾಟಕದ ಕ್ರೀಡಾಪಟುಗಳಿಗೆ 2021-22ನೇ ಸಾಲಿನಿಂದ ಸರ್ಕಾರವು ಅಮೃತ ಕ್ರೀಡಾ ದತ್ತು ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ಮುಂದಿನ ಪ್ಯಾರೀಸ್ ಒಲಂಪಿಕ್ ಕ್ರೀಡಾಕೂಟದಲ್ಲಿ ಪದಕ ವಿಜೇತ ಸಾಮಾರ್ಥ್ಯವುಳ್ಳ ಪ್ಯಾರಾ ಕ್ರೀಡಾಪಟುಗಳನ್ನೊಳಗೊಂಡಂತೆ 75 ಕ್ರೀಡಾಪಟುಗಳನ್ನು ಆಯ್ಕೆ ಮಾಡಿಲಾಗಿರುತ್ತದೆ. ಒಲಿಂಪಿಕ್ಸ್ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುವ ಸಾಮರ್ಥ್ಯ ಹೊಂದಿರುವ ಪ್ರತಿಭಾವಂತ ಕ್ರೀಡಾಪಟುಗಳನ್ನು ಗುರುತಿಸಿ, ಪೋಷಿಸಿ ಸಾಧನೆಗೆ ಅಗತ್ಯವಾದ ಬೆಂಬಲ ವ್ಯವಸ್ಥೆ ನೀಡುವುದು ಈ ಯೋಜನೆಯ ಗುರಿಯಾಗಿದೆ. ಸದರಿ ಯೋಜನೆಯ ಫಲಾನುಭವಿಗಳಿಗೆ ಅವರ ಕ್ರೀಡಾ ತರಬೇತಿಗಾಗಿ, ಕ್ರೀಡಾ ವಿಜ್ಞಾನದ ಬೆಂಬಲ, ಪೌಷ್ಠಿಕ ಆಹಾರಕ್ಕಾಗಿ, ತರಬೇತಿಗೆ ಅಗತ್ಯವಿರುವ ಕ್ರೀಡಾಕಿಟ್ ಖರೀದಿಸಲು, ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾಗವಹಿಸಲು, ದೈನಂದಿನ ಅಗತ್ಯತೆಗಾಗಿ ಮತ್ತು ಇತರೆ ವೆಚ್ಚಗಳಿಗಾಗಿ ಹಾಗೂ ವಿದ್ಯಾಭ್ಯಾಸದ ವೆಚ್ಚಕ್ಕಾಗಿ ತಲಾ ರೂ.10.00ಲಕ್ಷಗಳ ವಾರ್ಷಿಕ ಗರಿಷ್ಠ ಪ್ರೋತ್ಸಾಹ ಧನವನ್ನುನೀಡಲಾಗುತ್ತಿದೆ</td></tr>
<tr><td>ಆ)</td><td>ಇಲ್ಲಿಯವರೆಗೆ ಎಷ್ಟು ಜನ ಕ್ರೀಡಾಪಟುಗಳು ಸರ್ಕಾರದ ಈ ಪ್ರಯೋಜನೆಗಳನ್ನು ತೆಗೆದುಕೊಂಡಿದ್ದಾರೆ: (ಕಳೆದ 5 ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು)</td><td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕಳೆದ 05 ವರ್ಷಗಳಲ್ಲಿ ಸದರಿ ಯೋಜನೆಗಳಿಂದ ಪ್ರಯೋಜನ ಪಡೆದಿರುವ ಕ್ರೀಡಾಪಟುಗಳ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರಸಂ</th><th>ವರ್ಷ</th><th>ಕ್ರೀಡಾಪಟುಗಳ ಸಂಖ್ಯೆ</th><th>ವೆಚ್ಚವಾದ ಮೊತ್ತ</th></tr>
<tr><td colspan="4">ನಗದು ಪುರಸ್ಕಾರ</td></tr>
<tr><td>1</td><td>2018–19</td><td>397</td><td>ರೂ.4,00,00,000/-</td></tr>
<tr><td>2</td><td>2019–20</td><td>886</td><td>ರೂ.8,51,00,000/-</td></tr>
<tr><td>3</td><td>2020–21</td><td>404</td><td>ರೂ.5,28,60,000/-</td></tr>
<tr><td>4</td><td>2021–22</td><td>166</td><td>ರೂ.2,59,75,000/-</td></tr>
<tr><td>5</td><td>2022–23</td><td>317</td><td>ರೂ.15,35,65000/-</td></tr>
</table>
</td></tr>
</table>

| | | | |
|---|---|---|---|
| **ವಿದ್ಯಾರ್ಥಿ ವೇತನ** | | | |
| 1 | 2018–19 | 906 | ರೂ.90,60,000/– |
| 2 | 2019–20 | 524 | ರೂ.52,40,000/– |
| 3 | 2020–21 | – | – |
| 4 | 2021–22 | 335 | ರೂ.33,50,000/– |
| 5 | 2022–23 | 315 | ರೂ.31,15,000/– |
| **ಶೈಕ್ಷಣಿಕ ಶುಲ್ಕ ಮರುಪಾವತಿ** | | | |
| 1 | 2018–19 | 352 | ರೂ..1,09,39,995/– |
| 2 | 2019–20 | 298 | ರೂ..1,35,75,260/– |
| 3 | 2020–21 | 208 | ರೂ.60,38,088/– |
| 4 | 2021–22 | 205 | ರೂ.61,62,429/– |
| 5 | 2022–23 | 402 | ರೂ.1,25,07,000/– |

| | | |
|---|---|---|
| **ಇ)** | ಸರ್ಕಾರಿ ನೌಕರಿಯನ್ನು ಎಷ್ಟು ಜನರಿಗೆ ನೀಡಲಾಗಿದೆ: (ವಿವರ ನೀಡುವುದು) | ದಿನಾಂಕ 21-03-2023ರ ಸರ್ಕಾರದ ಅಧಿಸೂಚನೆಯಲ್ಲಿ ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಕ್ರೀಡೆಗಳು, ಪ್ಯಾರಾಏಷಿಯನ್ ಕ್ರೀಡೆಗಳು ಮತ್ತು ಕಾಮನ್‌ವೆಲ್ತ್ ಕ್ರೀಡೆಗಳಲ್ಲಿ ಪದಕ ವಿಜೇತರಾದ ಕ್ರೀಡಾಪಟುಗಳಿಗೆ ರಾಜ್ಯದ ಸಿವಿಲ್ ಸೇವೆಗಳಲ್ಲಿನ ಗ್ರೂಪ್-ಎ, ಗ್ರೂಪ್-ಬಿ, ಗ್ರೂಪ್-ಸಿ ಮತ್ತು ಗ್ರೂಪ್-ಡಿ ವೃಂದದ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಕುರಿತು ಸರ್ಕಾರದ ಅನುಮೋದನೆ ನೀಡಲಾಗಿದೆ. ಈ ರೀತಿಯ ನೇಮಕಾತಿ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.<br><br>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ತಾಲ್ಲೂಕು ಮಟ್ಟದ 176 ತರಬೇತುದಾರರ ಹುದ್ದೆಗಳ ನೇಮಕಾತಿಗೆ ಕರಡು ವೃಂದ ಮತ್ತು ನೇಮಕಾತಿ ನಿಯಮಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ವೈಎಸ್‌ಡಿ-ಇವೈಡಬ್ಲ್ಯೂ/178/2021; ದಿನಾಂಕ:27-03-2023ರನ್ವಯ ಪ್ರಕಟಿಸಿ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿರುತ್ತದೆ. ಸ್ವೀಕರಿಸಲಾಗಿರುವ ಸಲಹೆ/ಆಕ್ಷೇಪಣೆಗಳನ್ನು ಕ್ರೋಢೀಕರಿಸಲಾಗಿದ್ದು, ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿದೆ.<br><br>ಪೊಲೀಸ್ ಇಲಾಖೆಯಲ್ಲಿ ಕ್ರೀಡಾ ಸಾಧಕರಿಗೆ ಶೇಕಡ 2ರಷ್ಟು ಮೀಸಲಾತಿ ಅಡಿ ಸಬ್-ಇನ್‌ಸ್ಪೆಕ್ಟರ್ ಮತ್ತು |

| | | |
|---|---|---|
| | | ಕಾನ್‌ಸ್ಟೇಬಲ್‌ಗಳ ನೇಮಕಾತಿ ಮಾಡಲಾಗಿದೆ. ಸಾಧಕ ಕ್ರೀಡಾಪಟುಗಳಿಗೆ 2023-24ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪೊಲೀಸ್ ಮತ್ತು ಅರಣ್ಯ ಇಲಾಖೆಯ ನೇಮಕಾತಿಯಲ್ಲಿ ಶೇ.3 ರಷ್ಟು ಹುದ್ದೆಗಳನ್ನು ಮೀಸಲಿರಿಸಲಾಗುವುದು ಎಂದು ಘೋಷಿಸಲಾಗಿದೆ. |

**ಕಡತ ಸಂಖ್ಯೆ: ವೈಎಸ್ ಡಿ /164/ಇವೈಡಬ್ಲ್ಯೂ/2023**

**(ಬಿ. ನಾಗೇಂದ್ರ)**
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು